



ವಾಗಿದ್ದು, ಗುಡ್ಡಬೆಟ್ಟಗಳಿಂದ, ದಟ್ಟವಾದ ಅರಣ್ಯದಿಂದ ಹಚ್ಚ ಹಸಿರಾಗಿ ಕಂಗೊಳಿಸುತ್ತಿದೆ. ಪ್ರತಿವರ್ಷ ಮಳೆಗಾಲದಲ್ಲಿ ಮೈದುಂಬಿ ಹರಿಯುವ ಈ ಕಪಲೆಪ್ಪನ ದಿಡಿಗಿಗೆ ಮೈ ಕೊಡುವುದೇ ಸ್ವರ್ಗಸದೃಶ ಅನುಭವ. ಮಹಿಳೆಯರು, ಪುರುಷರು, ಮಕ್ಕಳು ಕುಟುಂಬ ಸಮೇತ ಬಂದು ಇದರ ಸೌಂದರ್ಯವನ್ನು ಸವಿಯನ್ನು ಸವಿಯುತ್ತಾರೆ.

**ಬರುವ ಮಾರ್ಗ:** ಕೊಪ್ಪಳದಿಂದ ಕುಷ್ಟಗಿ ಮಾರ್ಗವಾಗಿ ಬಂದರೆ ಈ ತಾಣ ಸಿಗುತ್ತದೆ. ಗದಗ ಜಿಲ್ಲೆಯವರು ಗಜೇಂದ್ರಗಡ ಮಾರ್ಗವಾಗಿ, ಬಾಗಲಕೋಟೆ ಜಿಲ್ಲೆಯವರು ಇಲಕಲ್ ಮಾರ್ಗವಾಗಿ, ಬಾದಾಮಿಯಿಂದ ಹನುಮನಾಳ ಮಾರ್ಗವಾಗಿ ಹನುಮಸಾಗರಕ್ಕೆ ಬಂದು 8 ಕಿಮೀ ಕ್ರಮಿಸಿದರೆ ಕಬ್ಬರಗಿ ಗ್ರಾಮವಿದೆ. ಈ ಗ್ರಾಮದಿಂದದ 2 ಕಿ.ಮೀ ಬೆಟ್ಟದಲ್ಲಿ ಕಾಲ್ನಡಿಗೆ ನಡೆಯಬೇಕು. ಮಿನಿ ಜೋಗ ಕಪೀಲತೀರ್ಥವು ಬೆಟ್ಟದ ಮಧ್ಯೆ ಸುಂದರ ರಮಣೀಯ ದೃಶ್ಯ ಕಣ್ಣಿಗೆ ಕಾಣುತ್ತದೆ.

ಇಲ್ಲೊಂದು ಈಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿ ಸಾಮೂಹಿಕ ಮದುವೆ ಕಾರ್ಯಕ್ರಮಗಳೂ ನಡೆಯುತ್ತವೆ. ಮಳೆಗಾಲದಲ್ಲಿ ನೀರು ಬಂದರೆ ವರ್ಷದ 6 ತಿಂಗಳು ಇಲ್ಲಿ ಪ್ರವಾಸಿಗರಿಂದ ಜಾತ್ರೆ ನಡೆಯುವುದು.

ನೀರು ಎಲ್ಲಿಂದ? ಕಪಿಲತೀರ್ಥದ ಗುಡ್ಡದ ಮೇಲೆ ಹಳ್ಳಗಳಿದ್ದು ಈ ಹಳ್ಳಗಳು  ಚಂದ್ರಗಿರಿ, ವೆಂಕಟಾಪೂರ, ಗಾಣದಾಳ ಎಂಬ ಊರುಗಳಿಂದ ಹರಿದು ಬರುತ್ತಿವೆ. ಈ ಹಳ್ಳಗಳಿಗೆ ಅಲ್ಲಲ್ಲಿ ಸಣ್ಣ ಕೆರೆಗಳೂ ಇವೆ. ಮಳೆಯಾದರೆ  ಸಾಕು ಕೆರೆಗಳಿಂದ ಹರಿದು ಬರುತ್ತದೆ. ಈ ಹಳ್ಳವು ಗುಡ್ಡಗಳ ಮಧ್ಯೆ ಹರಿದು ಬರುತ್ತಿದ್ದು ಕಪೀಲತೀರ್ಥ ಪ್ರದೇಶದಲ್ಲಿ  ಸುಮಾರು 40–50 ಅಡಿ ತಗ್ಗು ಇದ್ದು ಅಷ್ಟು  ಎತ್ತರದಿಂದ ನೀರು ಧುಮುಕ್ಕುತ್ತದೆ.

ಈ ಮಿನಿಜೋಗದ ವಿಶೇಷತೆಯೆಂದರೆ, ಇಲ್ಲಿ 40 ಅಡಿ ಅಂತರದಲ್ಲಿ ಎರಡು ಬಂಡೆಗಳಿವೆ. ಆ ಕಲ್ಲುಗಳಿಂದ ತಣ್ಣೀರು ಮತ್ತು ಬಿಸಿನೀರು ಬೀಳುವುದು! ಪೂರ್ಣ ಮೇಲ್ಭಾಗದ ಕಲ್ಲಿನಿಂದ ಬರುವ ನೀರು ಐಸ್ ರೀತಿಯಲ್ಲಿ ತಣ್ಣಗಿದ್ದರೆ, ಸ್ವಲ್ಪ ಕೆಳಭಾಗದ ಕಲ್ಲಿನಿಂದ ಬರುವ ನೀರು ಬಿಸಿಯಾಗಿರುತ್ತದೆ. ಆದರೆ ಕೆಳಭಾಗದ ಕಲ್ಲಿನಿಂದ ಬರುವ ಈ ಬಿಸಿನೀರು ಎಲ್ಲಿಂದ ಹೇಗೆ ಬರುತ್ತದೆ ಎಂಬುದು ನಿಗೂಢ.

**ಕಾಲ್ನಡಿಗೆ:** ಕಪೀಲತೀರ್ಥಕ್ಕೆ ಹೋಗಬೇಕಾದರೆ ಒಂದು ಕಿ.ಮೀ ನಡೆಯಲೇ ಬೇಕು. ಈ ಕಾಲ್ನಡಿಗೆಯೂ  ಪ್ರವಾಸಿಗರನ್ನು ಆಕರ್ಷಿಸುತ್ತದೆ. ಕಪಿಲತೀರ್ಥದ ಕೆಳಗೆ ಇರುವ ಕೆರೆಯೂ ಸುಂದರ. ದಟ್ಟವಾದ ಅರಣ್ಯ ಪ್ರದೇಶದ ಮಧ್ಯೆ ಇರುವುದರಿಂದ ಕಾಡುಪ್ರಾಣಿಗಳ ಭಯವಿದೆ. ದಾರಿಯಲ್ಲಿ ಕುರಿ ಕಾಯುವವರು ಮಾತ್ರ ಸಿಗುವರು.